## ಹಾನನ ರಿಸ್ಟ್ರಿಕ್ಟ್.

ತಾರೀಖು 1ನೇ ಜುಲೈ 1889.

ಹಾನನ ರಿಸ್ಟ್ರಿಕ್ಟ್ ಬೇಲೂರು ಸಬ್ ರೆಜಿಸ್ಟ್ರಾರ್ರ ಆಫಿಸ್‌ನಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸು ದಸ್ತಾವೇಜುಗಳನ್ನು ಕ್ರಮವಾದ ವಾರಸುದಾರ್‌ರಾಗಲಿ ಆಥವಾ ಅಧಿಕಾರಜೊಂದಿದ ಮುಕ್ತಾರೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಹಾಜರಾಗಿ ವಾವಸು ಪಡೆಯಬೇಕು, ತಪ್ಪಿದಲ್ಲಿ ರೆಜಿಸ್ಟ್ರೇಷನ್ ಆಕ್ಟು 65ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

| ನಂಬರ್ | ದಸ್ತಾವಜನ್ನು ಬರೆದುಕೊಟ್ಟವನ ಹೆಸರು ಮತ್ತು ಅಡಿಷ್ಟ. | ದಸ್ತಾವಜನ್ನು ಬರೆಕೊಂಡವರ ಹೆಸರು ಮತ್ತು ಅಡಿಷ್ಟ. | ರಿಜಿಸ್ಟರಿಗೆ ಹಾಜರಾದ ಸಾಲ್ಯಾಲ | ರಿಜಿಸ್ಟರ್ ಮಾಡಿದ ಸಾಲ್ಯಾಲ | ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು. |
|---|---|---|---|---|---|
| 109 | ಬೇಲೂರು ತಾಲ್ಲೂಕು ಜೋಡಿ ಹೀರಗುಪ್ಪೆ | 29 12 86 | 31 3 87 | ಜೋಡಿ ಹೀರಗುಪ್ಪೆ ಗ್ರಾಮದಲ್ಲಿರುವ |
| ——— | ಜೋಡಿ ಹೀರಗುಪ್ಪೆಯಲ್ಲಿರುವ ವೈಗೂ ನರಲ್ಲಿರುವ ಪುಟ್ಟಪ್ಪನವರ ಮಗ | | | ಜಮೀನುಗಳನ್ನ 600 ರೂಪಾಯಿಗಳಿಗೆ |
| 86—87 | ಲಕ್ಷ್ಮಿಪತಯ್ಯ | ಸುಂಪಯ್ಯನವರ ಮಗ ತಮ್ಮಯ್ಯ | | ಖರೀದಿಗೆ ಕೊಟ್ಟಿರುವದಾಗಿ |
| 10 | ಹುವ್ವೇನಹಳ್ಳಿಯಲ್ಲಿರುವ ಬೇಲೂರು ಈನಸಯ | 15 3 87 | 28 4 87 | ಬೇಲೂರು ಕೋಟೆವಳಗಿರುವ ಹಂಚಿನ ಮನೆ ಮತ್ತು ಹಿತ್ತಲನ್ನು 50 ರೂ |
| ——— | ವ ಬೇಲೂರು ಪೇಕ್ಷಲ್ಲಿರುವ ಪರದಿಸಾಬಿ ಮ | | | ಪಾಯಿಗೆ ಕುದ್ದಖರೀದಿಗೆ ಕೊಟ್ಟಿರುವದಾಗಿ |
| 87—88 | ಯಿಮಾಂಸಾಬಿ ಮಗ ಗ ಮದಾರುಸಾಬಿ | | | |
| | ಪೈಲ್ವಾ ಬುಡ್ಡಾಸಾ ಬಿ | | | |

ಪಿ. ಎಸ್. ಪೂರ್ಣಯ್ಯ, ರೆಜಿಸ್ಟ್ರಾರ್.

---

1889ನೇ ಇಸವಿ 4ನೇ ಜುಲೈ.

ಸಮಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ, ಹಾನನ ರಿಸ್ಟ್ರಿಕ್ಟ್ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜವಾಗಿಸಿಕೊಳ್ಳತಕ್ಕ ಹಕ್ಕುದಾರಿಯು ಸವಿಪ ವೃತ್ತಿಯಲ್ಲಿರುವ ಹೊಳೇನರಸೀಪುರ ತಾಲ್ಲೂಕು ಕುಪೇರಿಯಲ್ಲಿ ಸ್ವ 1889ನೇ ಇಸವಿ ಆಗಸ್ಟ್ ತಾರೀಖು 19ನೇ ಸೋಮವಾರ ದಿವಿ 11 ಘಂಟೆಗೆ ಮ್ಯಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಅಮಲ್‌ದಾರ್ರು ಆಥವಾ ಶಿರಸ್ತೇದಾರ್ರು ಹರಾಜು ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಹಾನನ ರಿಸ್ಟ್ರಿಕ್ಟ್ ಪೆಪ್ಯೂಟಿ ಕಮ್ಮಿಷನರವರಿಂದ ಮಂಜೂರ ಮಾಡುವ ಪರಿಯಂತರ ಖಾಯವಾದ್ದಾಗಿ ತಿಳಿದುಕೊಳ್ಳ ಕೂಡದು.

4. ಈ ಇಜಾರೆಯು ಸ್ವ 1890ನೇ ಇಸವಿ ಮಾರ್ಚ್ 31ರ ವರಿಗೆ ಜಾರಿಯಲ್ಲಿರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ವೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟಿ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಪೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ನೊದಲು 7 ದಿವಸದ ಳಗಾಗಿ ಕ್ರಯದ ವಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ವಂದಾಣಿಯಂತೆ ಆಗುವ ಲೋಕಲ್ ಸೆಸ್ಸು ದೀಪೀಲ್ ಬಾಕಿ ಕ್ರಯದ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತಗದುಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಆಥವಾ ಬಾಕಿ ಕ್ರಯದ ಮೊಬಲಗು ಪಾವತಿಮಾಡುದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಪ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರ್ರ ಸಮ್ಮತಿಯನ್ನ ಪಡೆಯಬೇಕು, ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು, ಇಜಾರೆದಾರನಿಗೆ ದೂರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂ ಕೂಡದು.

(b) ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರರ ಚರಾವು ಪಕ್ಕಿನಲ್ಲಿ ಪ್ರವೇ ಸಕೂಡದು.

(c) ಬಂಜರ್ ಜಮೀನುಗಳು ಸಾಗುವಳಿ ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು, ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ಬೆಳಿದಿರುತ್ತೆ.

(d) ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನು ಅಗಿಯಕೂಡದು ಎಂದುವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಖ್ ಯಿರುವ ಹಾಗೆ ಮಾಡಬೇಕು.

ಪಿ. ಎಸ್. ಪೂರ್ಣಯ್ಯ,
ಪೆಪ್ಯೂಟಿ ಕಮ್ಮಿಷನರ್.